

ಚುಕ್ಕಿ ಬೆಳಕಿನ ಜಾಡು
(ಕಾದಂಬರಿ)
ಲೇ: ಕರ್ಕಿ ಕೃಷ್ಣಮೂರ್ತಿ
ಬೆ: ರೂ. 200 ಪು: 208
ಪ್ರ: ಛಂದ ಪುಸ್ತಕ,
ಐ–004, ಮಂತ್ರಿ ಪ್ಯಾರಡೈಸ್,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು – 560 076

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ತಪ್ಪಿ ಹೋಯಿತಲ್ಲೇ ಚುಕ್ಕಿ ಬೆಳಕಿನ ಜಾಡು
ಇನ್ನಿಲ್ಲವಾಯಿತೆ ಆ ಹಕ್ಕಿ ಹಾಡು
ಹಸಿರೆಲೆ ಹೂವಿನ ನಡುವೆ ಹುಲ್ಲು ಹಾಸಿಗೆ
ಮುರಿದು ಹೋಯಿತೇ ಈಗ ಆ ಪುಟ್ಟ ಗೂಡು
– ದೇಶ ಕುಲಕರ್ಣಿ

ಈ ಕವಿತೆ ಕರ್ಕಿಯವರ ಕಾದಂಬರಿಯ ಎಪಿಗ್ರಾಫ್. ಇಡೀ ಕಾದಂಬರಿಯನ್ನು ಓದಿದ ಬಳಿಕವೂ ಮನಸ್ಸಿನಲ್ಲಿ ಉಳಿಯುವ ಕವಿತೆಯ ಸಾಲುಗಳಿವು. ಹಾಗಾಗಿ ಇದನ್ನು ಅವರು ಕೇವಲ ತೇಜಸ್ಸಿಗಾಗಿ ಬಳಸಿಲ್ಲ. ಇಡೀ ವಿಶ್ವವನ್ನೇ ತಮ್ಮ ಮನೆಯನ್ನಾಗಿಸಿಕೊಂಡು ಋತುಮಾನಕ್ಕನುಗುಣವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುವ, ತಮ್ಮ ನಾಡಗೂಡಿಗೆ ಮರಳುವ ಹಕ್ಕಿಗಳು ಚುಕ್ಕಿ ಬೆಳಕಿನ ಜಾಡನ್ನೂ ಅನುಸರಿಸುತ್ತವೆ ಎನ್ನುವುದೊಂದು ಪ್ರತೀತಿ. ಹಾಗೆಯೇ ಸುವಿಶಾಲ ಕಡಲಿನಲ್ಲಿ ಚಲಿಸುವ ಹಡಗುಗಳೂ ನಕ್ಷತ್ರಗಳ ಸ್ಥಾನ ಆಧರಿಸಿ ದಿಕ್ಕು, ಯಾನದ ಮಾರ್ಗ ನಿರ್ಧರಿಸುವುದಿದೆ ಎಂದು ಕೇಳಿದ್ದೇವೆ. ಇಲ್ಲಿ ಅಂಥ ಒಂದು ಜಾಡು ತಪ್ಪಿದ ಹಕ್ಕಿಯ ಹಾಡು ಇನ್ನಿಲ್ಲವಾಗುವ ಸನ್ನಿವೇಶವಿದೆ. ಅದಕ್ಕೆ ತಪ್ಪಿ ಹೋಗಿರುವುದು ಕೇವಲ ಜಾಡು ಮಾತ್ರವಲ್ಲ, ಅದರ ಗೂಡು ಕೂಡ ಎನ್ನುವುದು ದುರಂತ ಎನಿಸಿದರೂ, ನಿಜವಾದ ದುರಂತವಿರುವುದು ಅದು ಕಳೆದುಕೊಂಡ ಜಾಡು ಅಥವಾ ಗೂಡಿನಲ್ಲಲ್ಲ. ಅದು, ಅದಕ್ಕೆ ಸಹಜವಾದ ಹಾಡನ್ನು ಕಳೆದುಕೊಂಡಿದ್ದರಲ್ಲಿ.

ಕರ್ಕಿಯವರು ಇಲ್ಲಿ ವಲಸೆ ಹಕ್ಕಿಗೆ ಸಂವಾದಿಯಾಗಿ ವಿಶ್ವಮುಖಿಯಾದ ಮನುಷ್ಯನನ್ನು ಇಟ್ಟು ಅವನು ಕಳೆದುಕೊಳ್ಳುತ್ತ ಸಾಗಿದ ಜಾಡು, ಗೂಡು, ಪಾಡು, ಮತ್ತು ಮುಖ್ಯವಾಗಿ ಹಾಡುಗಳ ಕತೆಯನ್ನು ಹೇಳುತ್ತಿದ್ದಾರೆ. ಇದು ನಿರಂಜನನೊಬ್ಬನ ಕತೆಯಾಗದೆ, ಅವನ ಸಂಪರ್ಕಕ್ಕೆ ಬರುವ, ಕೊನೆಗೂ ಒಂದಲ್ಲಾ ಒಂದರ್ಥದಲ್ಲಿ ಹೊರಗಿನವರೇ